**<u>ದಿನಾಂಕಃ 25.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಡಿ **ವಕೀಲರಿಂದಃ**</u>

ನಾನು ಪಿಯುಸಿ ವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಸಹಿಯನ್ನು ಆಂಗ್ಲ ಭಾಷೆಯಲ್ಲಿ ಮಾಡುತ್ತೇನೆ. ನಾನು ಕಟ್ಟೇಪುರ ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದೇನೆ. ನಾನು ವ್ಯವಸಾಯವನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ. ನನಗೂ, ಈ ದಾವೆಯ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ರಕ್ತ ಸಂಬಂಧ ಇರುವುದಿಲ್ಲ. ಈ ದಾವೆಯನ್ನು ದಾಖಲಿಸಿದ ನಂತರ ಸುರೇಶರವರು ಸುಮಾರು 4-5 ತಿಂಗಳ ಹಿಂದೆ ನನ್ನನ್ನು ಭೇಟಿ ಮಾಡಿ ಮರಣ ಶಾಸನಕ್ಕೆ ಸಹಿ ಮಾಡಿರುವ ವಿಚಾರ ತಿಳಿಸಿ ಸಾಕ್ಷ್ಯ ನುಡಿಯುವಂತೆ ಕೇಳಿಕೊಂಡಿರುತ್ತಾರೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸುರೇಶ್ ಮತ್ತು ಅವರ ವಕೀಲರು ತಯಾರಿಸಿರುತ್ತಾರೆ. ಸದರಿ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ನ್ಯಾಯಾಲಯಕ್ಕೆ ಬಂದು ಸಹಿ ಮಾಡಿರುತ್ತೇನೆ. ಈ ದಾವೆಯ ವಾದಿ ಮತ್ತು ಪ್ರತಿವಾದಿಯು ಸಹೋದರರು ಎಂದು ನನಗೆ ಈಗ ತಿಳಿಯಿತು. ಈ ದಾವೆಯ ವಾದಿ ಮತ್ತು ಪ್ರತಿವಾದಿಯು ಸಹೋದರರು ಎಂದು ವಕೀಲರು ಮತ್ತು ಪ್ರತಿವಾದಿಯು ತಿಳಿಸಿರುತ್ತಾರೆ.

ನಾನು ಮರಣ ಶಾಸನಕ್ಕೆ ಸಹಿ ಮಾಡಿರುತ್ತೇನೆ. ನಾನು ಮಾದಾಪುರಕ್ಕೆ ಹೋಗಿ ಬರುತ್ತಿದ್ದಾಗ ಮಲ್ಲಪ್ಪರವರು ನನಗೆ ಪರಿಚಯವಾಗಿರುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ. ಮಾದಾಪುರ ಗ್ರಾಮದಲ್ಲಿ ಸುಮಾರು 10 ಸಾವಿರ ಜನಸಂಖ್ಯೆ ಇದೆ ಎಂದರೆ ಸರಿ. ಸದರಿ ಮಾದಾಪುರ ಗ್ರಾಮದಲ್ಲಿ ಮಲ್ಲಪ್ಪರವರ ಸಂಬಂಧಿಕರು ಇದ್ದಾರೆ ಎಂದರೆ ಸರಿ. ನಾನು ನನ್ನ ವೈಯಕ್ತಿಕ ಕೆಲಸದ ಮೇರೆಗೆ ಉಪ ನೊಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದಾಗ ಅಲ್ಲಿ ಮಲ್ಲಪ್ಪರವರು ನನಗೆ ಸಿಕ್ಕಿ ತಾನು ಮರಣ ಶಾಸನ ಪತ್ರ ಬರೆಯುತ್ತಿದ್ದೇನೆ ಸದರಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿ ಎಂದು ತಿಳಿಸಿದ್ದರಿಂದ ನಾನು ಸದರಿ ಮರಣ ಶಾಸನ ಪತ್ರಕ್ಕೆ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡುವ ಪೂರ್ವದಲ್ಲಿ ಸದರಿ ಮರಣ ಶಾಸನ ಪತ್ರವು ಬೆರಳಚ್ಚು ಆಗಿತ್ತು. ಸದರಿ ಮರಣ ಶಾಸನ ಪತ್ರವನ್ನು ಪತ್ರ ಬರಹಗಾರರಾದ ಮಹದೇವಯ್ಯರವರು ಓದಿ ಹೇಳಿದ ನಂತರ ಮಲ್ಲಪ್ಪರವರು ಸಹಿ ಮಾಡಿರುತ್ತಾರೆ ನಂತರ

ನಾನು ಸಹಿ ಮಾಡಿರುತ್ತೇನೆ. ನಾನು ಸದರಿ ಮರಣ ಶಾಸನ ಪತ್ರವನ್ನು ಓದಿ ನೋಡಿರುವುದಿಲ್ಲ. ಸದರಿ ಸಂಧರ್ಭದಲ್ಲಿ ನಾನು, ಮಲ್ಲಪ್ಪ, ಸಹದೇವ ಮತ್ತು ಪತ್ರ ಬರಹಗಾರರಾದ ಮಹದೇವಯ್ಯರವರು ಹಾಜರಿದ್ದೆವು. ಸದರಿ ಪತ್ರ ಬರೆಯುವ ಸಂಧರ್ಭದಲ್ಲಿ ನಾನು ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೆ ದಾಖಲಾತಿಗಳನ್ನು ನೋಡಿರುವುದಿಲ್ಲ. ನಾನು ಬೇರೆ ಯಾವುದೆ ದಾಖಲಾತಿಗಳಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ.

ಮಲ್ಲಪ್ಪರವರಿಗೆ 80 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸದರಿ ಮಲ್ಲಪ್ಪರವರಿಗೆ ಅಸ್ತಮಾ ಮತ್ತು ಹೃದಯ ಸಂಬಂಧಿ ಖಾಯಿಲೆಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಲ್ಲಪ್ಪರವರಿಗೆ ವಯಸ್ಸಾಗಿದ್ದುದ್ದರಿಂದ ಬೇರೆಯವರ ಸಹಾಯವಿಲ್ಲದೇ ಮನೆಯ ಹೊರಗೆ ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಈ ದಾವೆಯ ಪ್ರತಿವಾದಿಯ ಮೊದಲಿನಿಂದಲೂ ಸ್ನೇಹಿತರು ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯು ಸ್ನೇಹಿತರಾಗಿರುವುದರಿಂದ ನಾವಿಬ್ಬರೂ ಶಾಮೀಲಾಗಿ ನಿಡಿ-2ರ ದಾಖಲಾತಿಯನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಮಲ್ಲಪ್ಪರವರಿಗೆ ವಯಸ್ಸಾಗಿದ್ದುದ್ದರಿಂದ ಮತ್ತು ಖಾಯಿಲೆಯಿಂದ ಬಳಲುತ್ತಿದ್ದುದ್ದರಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ಸಮರ್ಥರಿರಲಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ಪ್ರತಿವಾದಿಯು ಸ್ನೇಹಿತರಾಗಿರುವುದರಿಂದ ಇಬ್ಬರೂ ಶಾಮೀಲಾಗಿ ದಾವಾ ಅನುಸೂಚಿ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ನಿಡಿ-2ರ ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮಲ್ಲಪ್ಪರವರು ಉಪ ನೊಂದಣಾಧಿಕಾರಿಗಳ ಕಛೇರಿಗೆ ಬಂದಿಲ್ಲ ಮತ್ತು ಯಾವುದೇ ಮರಣ ಶಾಸನ ಪತ್ರವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಮಲ್ಲಪ್ಪರವರ ಸಮಕ್ಷಮ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ